**ಎಸ್ ಸಿ ನಂ. 5050/2023**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂ:** 4

**ಪಿ ಡಬ್ಲೂ:** 2

| | |
|---|---|
| ಸಾಕ್ಷಿಯ ಹೆಸರು - | ದೇವರ ಮಣಿ ನಿಂಗಪ್ಪ |
| ತಂದೆಯ ಹೆಸರು - | ಸಣ್ಣ ಹನುಮಂತ |
| ವಯಸ್ಸು - | 28 ವರ್ಷ |
| ಉದ್ಯೋಗ - | ಕೂಲಿ ಕೆಲಸ |
| ವಾಸಸ್ಥಳ - | ಕೋಗಲಿ ಗ್ರಾಮ |

**ಸಾಕ್ಷಿಯನ್ನು ದಿನಾಂಕ: 29-05-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಪಿ. ಪಿ. ಅವರಿಂದ**

ಆರೋಪಿತರು ನನಗೆ ಗೊತ್ತು. ಚಾಸಾ -6 ನನ್ನ ತಾಯಿ. ಚಾಸಾ -1 ನನ್ನ ಅಕ್ಕ.

5 ವರ್ಷಗಳ ಹಿಂದೆ ಆಸ್ತಿ ವಿಚಾರವಾಗಿ ನಮ್ಮ ಹಾಗೂ ಆರೋಪಿತರ ನಡುವೆ ಬಾಯಿ ಮಾತಿನಲ್ಲಿ ಜಗಳವಾಗಿತ್ತು. ಆರೋಪಿತರು ಯಾವತ್ತೂ ನನ್ನನ್ನ ಆಗಲಿ, ಚಾಸಾ -1, 5 ಮತ್ತು 6 ರವರನ್ನಾಗಲಿ ಹಲ್ಲೆ ಮಾಡಿ, ಬಟ್ಟೆ ಹರಿದು, ಮಾನಕ್ಕೆ ಚ್ಯುತಿ ಬರುವಂತೆ ನಡೆದುಕೊಂಡಿಲ್ಲ. ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು: ಮಾನ್ಯ ಪಿ ಪಿ ಅವರಿಂದ**

ದಿ: 24-08-2020 ರಂದು ಬೆಳಿಗ್ಗೆ 09.30 ಗಂಟೆ ಸುಮಾರಿಗೆ ಆಸ್ತಿಯನ್ನು ಅಳತೆ ಮಾಡುವ ವಿಚಾರಕ್ಕೆ ಆರೋಪಿತರು ನನ್ನೊಂದಿಗೆ ಜಗಳ ಮಾಡಿ, ನನಗೆ ಹಾಗೂ ಚಾಸಾ -1, 5 ಮತ್ತು 6 ರವರಿಗೆ ಕೈಯಿಂದ ಹಲ್ಲೆ ಮಾಡಿ, ಚಾಸಾ -1 ರವರ ಸೀರೆ ಎಳೆದು ಅಪಮಾನ ಮಾಡಿದ ಬಗ್ಗೆ ಪೋಲಿಸರ ಮುಂದೆ ನಾನು............ ದಾಖಲಾಗಿರುವುದಿಲ್ಲ ಎಂದು ನಿಪಿ: 8 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಎಸ್ ಸಿ ನಂ. 5050/2023**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ ವಿ ಬಿ ., ವಕೀಲರಿಂದಃ ಇಲ್ಲಾ.**

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.